
## ಚುಂಬಕ ಗಾಳಿ

**'ಲೋಹಿಯಾ** ಪ್ರಕಾಶನ'ದ ಮೂಲಕ ಕನ್ನಡ ಪುಸ್ತಕಲೋಕಕ್ಕೆ ಹೊಸ ಗಾಳಿ-ಬೆಳಕು ತಂದವರು ಚನ್ನಬಸವಣ್ಣ. ಕರ್ನಾಟಕದ ಮೇಲೆ ಲೋಹಿಯಾ ಅವರು ಬೀರಿದ ಪ್ರಭಾವದ ಮೂರ್ತರೂಪವಾಗಿ ನೋಡಬಹುದಾದ 'ಲೋಹಿಯಾ ಪ್ರಕಾಶನ'ದ ಪುಸ್ತಕಗಳು ಜನಸಾಮಾನ್ಯರಿಗೆ ಸಮಾಜವಾದದ ಆಶಯಗಳನ್ನು ಪರಿಚಯಿಸುವ ಕೆಲಸವನ್ನು ಮಾಡಿದವು.

ಮೌಲ್ಯಾಧಾರಿತ ಪುಸ್ತಕ ಪ್ರಕಟಣೆ ಪರಿಕಲ್ಪನೆಯ ವಕ್ತಾರರ ರೂಪದಲ್ಲಿ ನೋಡಬಹುದಾದ ಚನ್ನಬಸವಣ್ಣನವರು, ತಮ್ಮ ಪ್ರಕಾಶನದ ಮೂಲಕ ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಉಂಟುಮಾಡಿದ ವೈಚಾರಿಕ ಪ್ರಜ್ಞೆ ಅನನ್ಯವಾದುದು. ಬಳ್ಳಾರಿಯನ್ನು ಕೇಂದ್ರವಾಗಿರಿಸಿಕೊಂಡು ಉತ್ತರ ಕರ್ನಾಟಕ ಭಾಗದಲ್ಲಿ ಸಾಹಿತ್ಯಿಕ ಚಟುವಟಿಕೆಗಳು ಹೆಚ್ಚಾಗುವ ನಿಟ್ಟಿನಲ್ಲೂ ಅವರ ಪಾತ್ರವಿದೆ. ಬರೆಯುವ ಸಾಮರ್ಥ್ಯ ಮತ್ತು ಬರವಣಿಗೆಗೆ ಬೇಕಾದ ಅನುಭವದ್ರವ್ಯವಿದ್ದರೂ, ಇತರರಿಂದ ಬರೆಸುವುದು ಹಾಗೂ ಓದಿಸುವುದರಲ್ಲೇ ಚನ್ನಬಸವಣ್ಣನವರ ಬದುಕಿನ ಸಾರ್ಥಕತೆ ಇರುವಂತಿದೆ. ಕನ್ನಡ ಸಾಹಿತ್ಯ-ಸಂಸ್ಕೃತಿಯ ಅಂತರ್ಜಲವನ್ನು ಪೊರೆಯುತ್ತಿರುವ ತೊರೆಯೊಂದರ ರೂಪದಲ್ಲಿ ನೋಡಬಹುದಾದ ಚನ್ನಬಸವಣ್ಣನವರ ವ್ಯಕ್ತಿತ್ವ-ಸಾಧನೆಯನ್ನು ಚಿತ್ರಿಸುವ ಬರಹಗಳ ಸಂಕಲನ 'ಚುಂಬಕ ಗಾಳಿ.'

ಪುಸ್ತಕಪ್ರೇಮಿಯಾಗಿ, ಪ್ರಕಾಶಕರಾಗಿ, ಸಾಮಾಜಿಕ ಚಿಂತನೆಯ ವ್ಯಕ್ತಿಯಾಗಿ, ಸಮಾಜವಾದದ ವಿದ್ಯಾರ್ಥಿಯಾಗಿ, ಎಲ್ಲಕ್ಕೂ ಮಿಗಿಲಾಗಿ ಅಂತಃಕರಣದ ವ್ಯಕ್ತಿಯಾಗಿ 'ಚುಂಬಕ ಗಾಳಿ'ಯ ಬರಹಗಳು ಚನ್ನಬಸವಣ್ಣನವರನ್ನು ಚಿತ್ರಿಸುತ್ತವೆ. ಕೃತಿಯಲ್ಲಿನ ಇಪ್ಪತ್ತೈದು ಬರಹಗಳು ಒಂದು ಕಾಲಘಟ್ಟದ ಸಾಹಿತ್ಯಿಕ ವಿದ್ಯಮಾನಗಳ ದಾಖಲೆಗಳ ರೂಪದಲ್ಲಿ ಮುಖ್ಯವೆನ್ನಿಸುತ್ತವೆ.

'ನಾವು ಉತ್ಪಾದಿಸುವುದು ಪ್ರಸಾದವೇ ಹೊರತು, ಪದಾರ್ಥವಲ್ಲ' ಎನ್ನುವುದು ಚನ್ನಬಸವಣ್ಣನವರ ಮಾತು. ಪುಸ್ತಕವನ್ನು ಪ್ರಸಾದವೆಂದು ಭಾವಿಸುವುದರ ಬಗ್ಗೆ ಕೆಲವರಿಗೆ ತಕರಾರು. ದೇವರ ನೈವೇದ್ಯದ ರೂಪ ಮಾತ್ರವಲ್ಲದೆ – ಅನ್ನ, ಸ್ಪಷ್ಟಪಡಿಸಿಕೊಳ್ಳುವುದು, ಶಾಂತಿ, ಸ್ಫುಟವಾದ ಶೈಲಿ ಕುರಿತಾದ ಕಾವ್ಯಗುಣ ಎನ್ನುವ ಅರ್ಥಗಳೂ 'ಪ್ರಸಾದ'ಕ್ಕಿವೆ. ಪುಸ್ತಕವನ್ನು ಸರಕಿನ ರೂಪದಲ್ಲಿ ನೋಡುವುದು ಅಪರಾಧವೇನೂ ಅಲ್ಲ. ಆದರೆ, ಪುಸ್ತಕ ಹಾಗೂ ಲೇಖಕ ಪ್ರದರ್ಶಕ ವಸ್ತುಗಳಂತೆ ಕಾಣಿಸುತ್ತಿರುವ ಇಂದಿನ ಸಾಹಿತ್ಯಿಕ ಸಂದರ್ಭದಲ್ಲಿ ಚನ್ನಬಸವಣ್ಣನವರ ಮಾತಿಗೆ ವಿಶೇಷ ಅರ್ಥವಿದೆ. ಪುಸ್ತಕ ಪದಾರ್ಥವಾದಾಗ ದೊರೆಯುವ ಲಾಭಕ್ಕಿಂತಲೂ, ಪ್ರಸಾದದ ರೂಪದಲ್ಲಿ ಅದು ಉಂಟು ಮಾಡುವ ಪರೋಕ್ಷ ಪರಿಣಾಮಗಳ ಬಗ್ಗೆ ಯೋಚಿಸಲು ಚನ್ನಬಸವಣ್ಣನವರ ಮಾತುಗಳು ನಮ್ಮನ್ನು ಪ್ರೇರೇಪಿಸಬೇಕಿದೆ. 'ಚುಂಬಕ ಗಾಳಿ' ಚನ್ನಬಸವಣ್ಣನವರಿಗೆ ಸಂದ ಅಭಿನಂದನೆ-ಗೌರವವಾಗಿದ್ದರೂ, ಪುಸ್ತಕ ಪ್ರಕಟಣೆಗೆ ಅಗತ್ಯವಾದ ಬದ್ಧತೆ ಮತ್ತು ನೈತಿಕತೆಯ ಪ್ರತಿಪಾದನೆ ಕೃತಿಯುದ್ದಕ್ಕೂ ಇದೆ; ಅದು ಕೃತಿಯ ಮೌಲ್ಯ ಹೆಚ್ಚಲು ಕಾರಣವಾಗಿದೆ. ಪತ್ರಕರ್ತ ಚಂದ್ರಕಾಂತ ವಡ್ಡು 'ಚುಂಬಕ ಗಾಳಿ'ಯ ಸಂಪಾದಕರು. ಚನ್ನಬಸವಣ್ಣನವರ ಸಂದರ್ಶನವೊಂದನ್ನು ಸೇರಿಸುವುದರ ಬಗ್ಗೆ ಸಂಪಾದಕರು ಯೋಚಿಸಬಹುದಿತ್ತು.




**ಚುಂಬಕ ಗಾಳಿ; ಸಂ: ಚಂದ್ರಕಾಂತ ವಡ್ಡು; ಪು: 116; ಬೆ: ರೂ. 100; ಪ್ರ: ಅಂಕುರ ಪ್ರಕಾಶ, ಬೆಂಗಳೂರು. ಫೋನ್: 9448520414**